# ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಪೌರಕಾರ್ಮಿಕರನ್ನು ಖಾಯಂ ಗೊಳಿಸುವ ಸಂಬಂಧ ಪಂಜಾಬ್ ಮತ್ತು ಹರಿಯಾಣ ಸರ್ಕಾರಗಳಲ್ಲಿ ಅಳವಡಿಸಿರುವ ಪೌರಕಾರ್ಮಿಕರ ನೇಮಕಾತಿ ಮತ್ತು ಇತರೆ ಸೌಲಭ್ಯಗಳ ಕುರಿತು ಅಧ್ಯಯನದ ವರದಿ

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ 20 ಟಿಎಂಎಸ್ 2017, ದಿನಾಂಕ 1/ 3/ 2017 ರ ಆದೇಶದಂತೆ ಮಾನ್ಯ ಅಧ್ಯಕ್ಷರು, ಸದಸ್ಯರು, ಕಾರ್ಯದರ್ಶಿಗಳು ಮತ್ತು ಮಾಜಿ ಅಧ್ಯಕ್ಷರು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಸಚಿವಾಲಯ ಹಾಗೂ ಜಂಟಿ ನಿರ್ದೇಶಕರು (ಆಡಳಿತ), ಕಾರ್ಯಪಾಲಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯಗಳನ್ನು ಒಳಗೊಂಡ ತಂಡ ದಿನಾಂಕ 6/ 3/ 2017 ರಿಂದ 9/ 3/ 2017 ರವರೆಗೆ ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಿಗೆ ಭೇಟಿ ನೀಡಿರುತ್ತದೆ. ಸದರಿ ರಾಜ್ಯಗಳಲ್ಲಿನ ಖಾಯಂ ಪೌರಕಾರ್ಮಿಕರು, ಹೊರಗುತ್ತಿಗೆ ಹಾಗೂ ದಿನಗೂಲಿ ಪೌರಕಾರ್ಮಿಕರುಗಳ ನೇಮಕಾತಿ, ಹೊರ ಸಂಪನ್ಮೂಲದ ಮೂಲಕ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ಗೊಳಿಸುವ ಬಗ್ಗೆ, ಪೌರಕಾರ್ಮಿಕರಿಗೆ ನೀಡುತ್ತಿರುವ ಇತರೆ ಸೌಲಭ್ಯಗಳ ಬಗ್ಗೆ, ಘನ ತ್ಯಾಜ್ಯ ನಿರ್ವಹಣೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸ್ವಚ್ಛತಾ ಕಾರ್ಯ ನಿರ್ವಹಿಸಲು ಅಳವಡಿಸಿಕೊಂಡಿರುವ ಉತ್ತಮ ಪದ್ದತಿಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ಅಧ್ಯಯನ ತಂಡದ ವಿವರ ಈ ಕೆಳಕಂಡಂತಿದೆ.

1) ಶ್ರೀ ಎಂ.ಆರ್. ವೆಂಕಟೇಶ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
2) ಶ್ರೀ ನಾರಾಯಣ, ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
3) ಶ್ರೀ ಗೋಕುಲ ನಾರಾಯಣ ಸ್ವಾಮಿ, ಸದಸ್ಯರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
4) ಡಾ.ಹೆಚ್. ನಟರಾಜ್, ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
5) ಶ್ರೀ ಎ. ಬಸವರಾಜು, ಜಂಟಿ ನಿರ್ದೇಶಕರು (ಆಡಳಿತ), ಪೌರಾಡಳಿತ ನಿರ್ದೇಶನಾಲಯ

6) ಶ್ರೀ ಎಂ.ಸಿ. ಸೋಮೇಶ್, ಕಾರ್ಯಪಾಲಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ
7) ಶ್ರೀ ಈ. ಶಿವರುದ್ರಪ್ಪ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ಈ ಅಧ್ಯಯನ ತಂಡವು ಪಂಜಾಬ್ ರಾಜ್ಯದ ಚಂಡೀಗಢ ಮಹಾನಗರಪಾಲಿಕೆ, ಮೊಹಾಲಿ ಮಹಾನಗರಪಾಲಿಕೆ, ಪಂಜಾಬ್ ಸಫಾಯಿ ಕರ್ಮಚಾರಿ ಆಯೋಗ, ಅಮೃತಸರ ಮಹಾನಗರಪಾಲಿಕೆ ಹಾಗೂ ಹರಿಯಾಣ ರಾಜ್ಯದ ಪಂಚಕುಲ ಮಹಾನಗರಪಾಲಿಕೆಗಳಿಗೆ ಭೇಟಿ ನೀಡಿ ಮಹಾಪೌರರು, ಆಯುಕ್ತರು, ಇತರೆ ಅಧಿಕಾರಿಗಳು ಹಾಗೂ ಪೌರಕಾರ್ಮಿಕರನ್ನು ಭೇಟಿ ಮಾಡಿ ಖಾಯಂ ಪೌರಕಾರ್ಮಿಕರು, ಹೊರಗುತ್ತಿಗೆ ಹಾಗೂ ದಿನಗೂಲಿ ಪೌರಕಾರ್ಮಿಕರುಗಳ ನೇಮಕಾತಿ, ಹೊರ ಸಂಪನ್ಮೂಲದ ಮೂಲಕ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ಗೊಳಿಸುವ ಬಗ್ಗೆ, ಪೌರಕಾರ್ಮಿಕರ ನೀಡುತ್ತಿರುವ ಇತರೆ ಸೌಲಭ್ಯಗಳ ಬಗ್ಗೆ, ಘನ ತ್ಯಾಜ್ಯ ನಿರ್ವಹಣೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸ್ವಚ್ಛತಾ ಕಾರ್ಯ ನಿರ್ವಹಿಸಲು ಅಳವಡಿಸಿಕೊಂಡಿರುವ ಉತ್ತಮ ಪದ್ಧತಿಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ವಿವರ ಕೆಳಕಂಡಂತಿದೆ.

## 1. ಚಂಡೀಗಢ ಮಹಾನಗರಪಾಲಿಕೆಗೆ ಭೇಟಿ:

ದಿನಾಂಕ 6/ 3/ 2017 ರಂದು ಬೆಳಗ್ಗೆ 11.00 ಗಂಟೆಗೆ ಚಂಡೀಗಢ ಮಹಾನಗರಪಾಲಿಕೆಯ ಪೂಜ್ಯ ಮಹಾಪೌರರು, ಸದಸ್ಯರುಗಳು ಮತ್ತು ಶ್ರೀ ಮನೋಜ್ ಖತ್ರಿ, ಜಂಟಿ ಆಯುಕ್ತರೊಂದಿಗೆ ಮಹಾನಗರಪಾಲಿಕೆಯ ಸಭಾಂಗಣದಲ್ಲಿ ಅಧ್ಯಯನ ತಂಡದ ಜೊತೆ ಸಭೆ ನಡೆಸಲಾಯಿತು. ಮನೋಜ್ ಖತ್ರಿರವರು ಸಭೆಯಲ್ಲಿ ಚಂಡೀಗಢ ಮಹಾನಗರಪಾಲಿಕೆಯಲ್ಲಿ 950 ಖಾಯಂ ಪೌರಕಾರ್ಮಿಕರು, 150 ಜನ ದಿನಗೂಲಿ ಪೌರಕಾರ್ಮಿಕರು ಹಾಗೂ 1100 ಜನ ಗುತ್ತಿಗೆ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವವರ ಬಗ್ಗೆ ಮಾಹಿತಿ ನೀಡಿರುತ್ತಾರೆ. ಚಂಡೀಗಢ ಮಹಾನಗರಪಾಲಿಕೆಯು 5 ವರ್ಷಗಳ ಕಾಲ ನಗರವನ್ನು ಸ್ವಚ್ಛಗೊಳಿಸಲು ಮತ್ತು ಎಲ್ಲಾ

ರೀತಿಯ ಸ್ವಚ್ಛತೆ, ಕಸ, ಘನ ತ್ಯಾಜ್ಯಗಳನ್ನು ನಿರ್ವಹಿಸಲು ಲಯನ್ ಸರ್ವೀಸ್ ಲಿಮಿಟೆಡ್ ಕಂಪನಿಯ ಜೊತೆ ಗುತ್ತಿಗೆಯನ್ನು ಒಪ್ಪಂದ ಮಾಡಿಕೊಂಡು ಕಂಪನಿಗೆ ಸ್ವಚ್ಛತಾ ಕಾರ್ಯವನ್ನು ವಹಿಸಲಾಗಿರುತ್ತದೆ. ಅತಿ ಹೆಚ್ಚಾಗಿ ಯಂತ್ರಗಳ ಮೂಲಕ ನಗರದ ಪ್ರಮುಖ ರಸ್ತೆಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಖಾಯಂ ಪೌರ ಕಾರ್ಮಿಕರಿಗೆ ಮತ್ತು ದಿನಗೂಲಿ ಪೌರಕಾರ್ಮಿಕರಿಗೆ ನೇರವಾಗಿ ವೇತನವನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ನೀಡಲಾಗುತ್ತಿದೆ. ಗುತ್ತಿಗೆ ಪೌರಕಾರ್ಮಿಕರಿಗೆ ಲಯನ್ ಸರ್ವೀಸ್ ಲಿ., ಕಂಪನಿಯಿಂದ ವೇತನ ನೀಡಲಾಗುತ್ತಿದೆ.

## ಸಫಾಯಿ ಕರ್ಮಚಾರಿಗಳ ನೇಮಕಾತಿ ಮತ್ತು ಕನಿಷ್ಠ ವೇತನ ನೀಡುತ್ತಿರುವ ಬಗ್ಗೆ ವಿವರ:

ಗುತ್ತಿಗೆ ಪೌರಕಾರ್ಮಿಕರಿಗೆ ಡೆಪ್ಯುಟಿ ಕಮೀಷನರ್ ರವರು ನಿರ್ಧರಿಸಿರುವ ದರದಂತೆ (ಡಿ.ಸಿ. ರೇಟ್ ಕನಿಷ್ಠ ವೇತನ ದರ) ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಗುತ್ತಿಗೆದಾರರಿಂದ ಬ್ಯಾಂಕ್ ಮೂಲಕ ವೇತನವನ್ನು ಗುತ್ತಿಗೆ ಕಾರ್ಮಿಕರಿಗೆ ಪಾವತಿಸಲಾಗುತ್ತಿರುತ್ತದೆ.

| ಹುದ್ದೆಯ ವಿವರ | ಸಂಖ್ಯೆ | ಷರಾ |
|---|---|---|
| ಖಾಯಂ ಪೌರಕಾರ್ಮಿಕರು | 950 | ಖಾಯಂ ಪೌರಕಾರ್ಮಿಕರಿಗೆ ಡಿ ದರ್ಜೆಯ ನೌಕರರ ವೇತನ ಶ್ರೇಣಿಯಂತೆ ವೇತನ ಪಾವತಿಸಲಾಗುತ್ತಿದೆ. |
| ದಿನಗೂಲಿ ಪೌರಕಾರ್ಮಿಕರು | 150 | ದಿನಗೂಲಿ ನೌಕರರಿಗೆ ಖಾಯಂ ಪೌರಕಾರ್ಮಿಕರ ವೇತನ ಶ್ರೇಣಿಗೆ ಹತ್ತಿರದ ದರದಲ್ಲಿ ವೇತನವನ್ನು ನೇರವಾಗಿ ಮಹಾನಗರಪಾಲಿಕೆ ಮೂಲಕ ಪಾವತಿಸಲಾಗುತ್ತಿದೆ. |
| ಗುತ್ತಿಗೆ ಪೌರಕಾರ್ಮಿಕರು | 1100 | ಮೆ. ಲಯನ್ ಸರ್ವೀಸ್ ಲಿಮಿಟೆಡ್ ಮೂಲಕ ಪ್ರತೀ ತಿಂಗಳು ರೂ. 14500/– ಗಳನ್ನು ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗುತ್ತಿದೆ. |

## ಸಫಾಯಿ ಕರ್ಮಚಾರಿಗಳಿಗೆ ಒದಗಿಸುತ್ತಿರುವ ವಿವಿಧ ಸೌಲಭ್ಯಗಳು:

- ಚಂಡೀಗಢ ಮಹಾನಗರ ಪಾಲಿಕೆಯಲ್ಲಿ ಎರಡು ರೀತಿಯಲ್ಲಿ (**Manual Cleaning and Mechanized Cleaning**) ನಗರವನ್ನು ಸ್ವಚ್ಛಗೊಳಿಸಲಾಗುತ್ತಿದೆ.

- ಪೌರಕಾರ್ಮಿಕರು ವಾರದಲ್ಲಿ 6 ದಿನಗಳು ಕಾರ್ಯನಿರ್ವಹಿಸುತ್ತಾರೆ. ಯಂತ್ರಗಳ ಮೂಲಕ 3 ದಿನಗಳ ಕಾಲ ಮುಖ್ಯ ರಸ್ತೆಗಳನ್ನು ಸ್ವಚ್ಛಗೊಳಿಸಲಾಗುವುದು. ಮತ್ತು ಪ್ರತೀ ದಿನ 8 ಗಂಟೆಗಳ ಕಾಲ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ.
- ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವಾಗ 8ನೇ ತರಗತಿ ಉತ್ತೀರ್ಣದ ಅರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಟೆಂಡರ್‌ದಾರರಾದ ಲಯನ್ ಸರ್ವೀಸ್ ಲಿಮಿಟೆಡ್ ರವರ ಮೂಲಕ ವೇತನವನ್ನು ಹಾಗೂ ಇ.ಎಸ್.ಐ ಮತ್ತು ಪಿ.ಎಫ್.ನ್ನು ಪ್ರತೀ ತಿಂಗಳು ಪೌರಕಾರ್ಮಿಕರ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ 5 ವರ್ಷ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಹೊರ ಸಂಪನ್ಮೂಲ ಕಂಪನಿ ವತಿಯಿಂದ ಒಂದು ತಿಂಗಳದ ವೇತನ ಮೊತ್ತ, ಬೋನಸ್, ಗ್ರಾಚ್ಯುಟಿಯನ್ನು ನೀಡಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸುರಕ್ಷತಾ ಸಾಮಾಗ್ರಿಗಳಾದ ಹ್ಯಾಂಡ್ ಗ್ಲೌಸ್, ಗಂಬೂಟ್, ಮಾಸ್ಕ್, ಏಪ್ರನ್ ನೀಡಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಪ್ರತೀ ವರ್ಷ 10 ಪ್ಯಾಕೆಟ್ ಸೋಪ್, ಎರಡು ಜೊತೆ ಸಮವಸ್ತ್ರ ಹಾಗೂ ಪ್ರತೀ ತಿಂಗಳು ಎರಡು ಕೆ.ಜಿ. ಬೆಲ್ಲ ಮತ್ತು ಅಡುಗೆ ಎಣ್ಣೆಯನ್ನು ನೀಡಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೂ ವಸತಿ ಗೃಹಗಳನ್ನು ನೀಡಲಾಗಿರುತ್ತದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೆ ಗುತ್ತಿಗೆದಾರರು 3 ತಿಂಗಳೀಗೊಮ್ಮೆ ಆರೋಗ್ಯ ತಪಾಸಣೆಯನ್ನು ಮಾಡಿಸಲಾಗುತ್ತಿದೆ.

**ಉತ್ತಮ ಪದ್ಧತಿಗಳು (Best Practices):**

- ಹೊರ ಸಂಪನ್ಮೂಲ ಪೌರಕಾರ್ಮಿಕರಿಗೆ ಪ್ರತೀ ವರ್ಷ 10 ಪ್ಯಾಕೆಟ್ ಸೋಪ್, ಎರಡು ಜೊತೆ ಸಮವಸ್ತ್ರ ಹಾಗೂ ಪ್ರತೀ ತಿಂಗಳು ಎರಡು ಕೆ.ಜಿ. ಬೆಲ್ಲ ಮತ್ತು ಅಡುಗೆ ಎಣ್ಣೆಯನ್ನು ನೀಡಲಾಗುತ್ತಿದೆ.
- ಚಂಡೀಗಢ ಮಹಾನಗರ ಪಾಲಿಕೆಯಲ್ಲಿ ಎರಡು ರೀತಿಯಲ್ಲಿ (Manual Cleaning and Mechanized Cleaning) ನಗರವನ್ನು ಸ್ವಚ್ಛಗೊಳಿಸಲಾಗುತ್ತಿದೆ.

## 2. ಪಂಜಾಬ್ ರಾಜ್ಯದ ಮೊಹಾಲಿ ಮಹಾನಗರಪಾಲಿಕೆಗೆ ಭೇಟಿ:

ದಿನಾಂಕ 6/ 3/ 2017 ರಂದು ಮಧ್ಯಾಹ್ನ 3.00 ಗಂಟೆಗೆ ಮೊಹಾಲಿ ನಗರದಲ್ಲಿ ಜಂಟಿ ಆಯುಕ್ತರು ಮತ್ತು ಸೂಪರ್‌ಡೆಂಟ್ ಇಂಜಿನಿಯರ್‌ರೊಂದಿಗೆ ಮಹಾನಗರಪಾಲಿಕೆ

ಸಭಾಂಗಣದಲ್ಲಿ ಅಧ್ಯಯನ ತಂಡದ ಜೊತೆ ಸಭೆ ನಡೆಸಲಾಯಿತು. ಸೂಪರ್‌ಡೆಂಟ್ ಇಂಜಿನಿಯರ್ ರವರು ಸಭೆಯಲ್ಲಿ ಮಹಾನಗರ ಪಾಲಿಕೆಯಲ್ಲಿ 142 ಖಾಯಂ ಪೌರಕಾರ್ಮಿಕರು ಹಾಗೂ 600 ಜನ ಗುತ್ತಿಗೆ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವವರ ಬಗ್ಗೆ ಮಾಹಿತಿ ನೀಡಿರುತ್ತಾರೆ. ಮೊಹಾಲಿ ಮಹಾನಗರಪಾಲಿಕೆಯಲ್ಲಿ 1.52 ಲಕ್ಷ ಜನಸಂಖ್ಯೆಯಿದ್ದು, ಮಹಾನಗರ ಪಾಲಿಕೆಯು 5 ವರ್ಷಗಳ ಕಾಲ ನಗರವನ್ನು ಸ್ವಚ್ಛಗೊಳಿಸಲು ಮತ್ತು ಯಾವುದೇ ರೀತಿಯ ತ್ಯಾಜ್ಯಗಳನ್ನು ಸ್ವಚ್ಛಗೊಳಿಸುವುದಕ್ಕಾಗಿ ಗುತ್ತಿಗೆಯನ್ನು ಲಯನ್ ಸರ್ವೀಸ್ ಲಿಮಿಟೆಡ್ ನೀಡಲಾಗಿರುತ್ತದೆ. ಅತಿ ಹೆಚ್ಚಾಗಿ ಯಂತ್ರಗಳ ಮೂಲಕ ನಗರದ ಪ್ರಮುಖ ರಸ್ತೆಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಖಾಯಂ ಪೌರ ಕಾರ್ಮಿಕರಿಗೆ ಮತ್ತು ದಿನಗೂಲಿ ಪೌರಕಾರ್ಮಿಕರಿಗೆ ನೇರವಾಗಿ ವೇತನವನ್ನು ನೀಡುತ್ತಿರುತ್ತಾರೆ.

## ಸಫಾಯಿ ಕರ್ಮಚಾರಿಗಳ ನೇಮಕಾತಿ ಮತ್ತು ಕನಿಷ್ಠ ವೇತನ ನೀಡುತ್ತಿರುವ ವೇತನದ ವಿವರ:

ಗುತ್ತಿಗೆ ಪೌರಕಾರ್ಮಿಕರಿಗೆ 5 ವರ್ಷಗಳ ಕಾಲ ಮೊಹಾಲಿ ಮಹಾನಗರಪಾಲಿಕೆ ವ್ಯಾಪ್ತಿಗೆ ಬರುವ ಎಲ್ಲಾ ರಸ್ತೆಗಳು ಹಾಗೂ ಇತರೆ ಎಲ್ಲಾ ತ್ಯಾಜ್ಯ ವಸ್ತುಗಳನ್ನು ಮತ್ತು ನಗರವನ್ನು ಸ್ವಚ್ಛಗೊಳಿಸಲು ಗುತ್ತಿಗೆಯನ್ನು ಲಯನ್ ಸರ್ವೀಸ್ ಲಿಮಿಟೆಡ್‌ಗೆ ನೀಡಲಾಗಿರುತ್ತದೆ. ಗುತ್ತಿಗೆ ಪೌರಕಾರ್ಮಿಕರಿಗೆ ಡಿ.ಸಿ. ರೇಟ್ (ಜಿಲ್ಲಾಧಿಕಾರಿ ನಿಗಧಿಪಡಿಸಿದ ಕನಿಷ್ಠ ವೇತನ) ನಿಗಧಿಪಡಿಸಲಾಗಿದೆ. ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಗುತ್ತಿಗೆದಾರರಿಂದ ಬ್ಯಾಂಕ್ ಮೂಲಕ ವೇತನವನ್ನು ಗುತ್ತಿಗೆ ಕಾರ್ಮಿಕರಿಗೆ ಪಾವತಿಸಲಾಗುತ್ತಿರುತ್ತದೆ. ಬಯೋಮೆಟ್ರಿಕ್ ಹಾಜರಾತಿಯನ್ನು ಪಡೆದು ವೇತನ ಪಾವತಿಸಲಾಗುತ್ತಿದೆ.

| ಹುದ್ದೆಯ ವಿವರ | ಸಂಖ್ಯೆ | ಷರಾ |
|---|---|---|
| ಖಾಯಂ ಪೌರಕಾರ್ಮಿಕರು | 142 | ಖಾಯಂ ಪೌರಕಾರ್ಮಿಕರಿಗೆ ಡಿ ದರ್ಜೆಯ ನೌಕರರ ವೇತನ ಶ್ರೇಣಿಯಂತೆ ವೇತನ ಪಾವತಿಸಲಾಗುತ್ತಿದೆ. |
| ಗುತ್ತಿಗೆ ಪೌರಕಾರ್ಮಿಕರು | 600 | ಮೆ. ಲಯನ್ ಸರ್ವೀಸ್ ಲಿಮಿಟೆಡ್ ಮೂಲಕ ಪ್ರತೀ ತಿಂಗಳು ರೂ. 14500/- ಗಳನ್ನು ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗುತ್ತಿದೆ. |

## ಸಫಾಯಿ ಕರ್ಮಚಾರಿಗಳಿಗೆ ಒದಗಿಸುತ್ತಿರುವ ವಿವಿಧ ಸೌಲಭ್ಯಗಳು:

- ಮೊಹಾಲಿ ಮಹಾನಗರ ಪಾಲಿಕೆಯಲ್ಲಿ ಎರಡು ರೀತಿಯಲ್ಲಿ (**Manual Cleaning and Mechanized Cleaning**) ನಗರವನ್ನು ಸ್ವಚ್ಛಗೊಳಿಸಲಾಗುತ್ತಿದೆ.
- ಪೌರಕಾರ್ಮಿಕರು ವಾರದಲ್ಲಿ 6 ದಿನಗಳು ಕಾಲ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ ಹಾಗೂ ವಾರಕ್ಕೆ 3 ದಿನಗಳು ಯಂತ್ರಗಳ ಮೂಲಕ ಮುಖ್ಯ ರಸ್ತೆಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಮತ್ತು ಪ್ರತಿ ದಿನ 8 ಗಂಟೆಗಳ ಕಾಲ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ.
- ಹೊರ ಸಂಪನ್ಮೂಲ ಪೌರಕಾರ್ಮಿಕರಿಗೆ ಬಯೋಮೆಟ್ರಿಕ್ ಮೂಲಕ ಬೆಳಗಿನ ಹಾಜರಾತಿ ಮತ್ತು ಸಂಜೆಯ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ.
- ಪೌರಕಾರ್ಮಿಕರು ವಿವಿಧ ರಸ್ತೆಗಳಲ್ಲಿ ಹಾಗೂ ನಗರದ ಇತರ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವುದನ್ನು ಮೇಲ್ವಿಚಾರಣೆ ಮಾಡಲು ಜಿ.ಪಿ.ಎಸ್ ಅಳವಡಿಸಿದ್ದು, ಪ್ರತಿಯೊಬ್ಬ ಪೌರಕಾರ್ಮಿಕರು ಅವರವರಿಗೆ ಹಂಚಿಕೆ ಮಾಡಿದ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಆ ಭಾಗಗಳ ಸೂಪರ್‌ವೈಸರ್‌ಗಳು ಕೆಲಸದ ಸ್ಥಳದ ಫೋಟೋಗಳನ್ನು ಅಪ್‌ಲೋಡ್ ಮಾಡಲಾಗುತ್ತಿದ್ದು, ಪ್ರತಿಯೊಬ್ಬ ಪೌರಕಾರ್ಮಿಕರ ಕೆಲಸ ನಿರ್ವಹಣೆಯನ್ನು ಜಿ.ಪಿ.ಎಸ್ ಆಧಾರಿತ ಸಾಫ್ಟ್‌ವೇರ್ ಮೂಲಕ ಮಹಾನಗರಪಾಲಿಕೆ ಕಚೇರಿಯಲ್ಲಿನ ನಿಯಂತ್ರಣ ಕೊಠಡಿಯಲ್ಲಿ ಉಸ್ತುವಾರಿ ಮಾಡಲಾಗುತ್ತಿದೆ.
- ಪೌರಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ 8ನೇ ತರಗತಿ ಪಾಸಾಗಿರಬೇಕೆಂದು ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಟೆಂಡರ್‌ದಾರರಾದ ಲಯನ್ ಸರ್ವೀಸ್ ಲಿಮಿಟೆಡ್ ರವರ ಮೂಲಕ ವೇತನವನ್ನು ಹಾಗೂ ಇ.ಎಸ್.ಐ ಮತ್ತು ಪಿ.ಎಫ್.ನ್ನು ಪ್ರತೀ ತಿಂಗಳು ಪೌರಕಾರ್ಮಿಕರ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಬೋನಸ್, ಗ್ರಾಚ್ಯುಟಿ, ನೀಡಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸುರಕ್ಷತಾ ಸಾಮಾಗ್ರಿಗಳಾದ ಹ್ಯಾಂಡ್ ಗ್ಲೌಸ್, ಗಂಬೂಟ್, ಮಾಸ್ಕ್, ಏಫ್ರನ್ ನೀಡಲಾಗುತ್ತಿರುತ್ತದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಪ್ರತಿ ವರ್ಷ 10 ಪ್ಯಾಕೆಟ್ ಸೋಪ್, ಎರಡು ಜೊತೆ ಸಮವಸ್ತ್ರ ನೀಡಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಪ್ರತಿ ತಿಂಗಳು ಎರಡು ಕೆ.ಜಿ. ಬೆಲ್ಲ ಮತ್ತು ಅಡುಗೆ ಎಣ್ಣೆಯನ್ನು ನೀಡಲಾಗುತ್ತಿದೆ.
- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೂ ವಸತಿ ಗೃಹಗಳನ್ನು ನೀಡಲಾಗಿರುತ್ತದೆ. .

- ಹೊರ ಸಂಪನ್ಮೂಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೆ ಗುತ್ತಿಗೆದಾರರ ವತಿಯಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆಯನ್ನು ಮಾಡಿಸಲಾಗುತ್ತಿದೆ.

ಉತ್ತಮ ಪದ್ಧತಿಗಳು (Best Practices):

- ಹೊರ ಸಂಪನ್ಮೂಲ ಪೌರಕಾರ್ಮಿಕರಿಗೆ ಪ್ರತೀ ವರ್ಷ 10 ಪ್ಯಾಕೆಟ್ ಸೋಪ್, ಎರಡು ಜೊತೆ ಸಮವಸ್ತ್ರ ಹಾಗೂ ಪ್ರತೀ ತಿಂಗಳು ಎರಡು ಕೆ.ಜಿ. ಬೆಲ್ಲ ಮತ್ತು ಅಡುಗೆ ಎಣ್ಣೆಯನ್ನು ನೀಡಲಾಗುತ್ತಿದೆ.
- ಮೊಹಾಲಿ ಮಹಾನಗರಪಾಲಿಕೆಯಲ್ಲಿ ಎರಡು ರೀತಿಯಲ್ಲಿ (**Manual Cleaning and Mechanized Cleaning**) ನಗರವನ್ನು ಸ್ವಚ್ಛಗೊಳಿಸಲಾಗುತ್ತಿದೆ.
- ಪೌರಕಾರ್ಮಿಕರು ವಿವಿಧ ರಸ್ತೆಗಳಲ್ಲಿ ಹಾಗೂ ನಗರದ ಇತರ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವುದನ್ನು ಮೇಲ್ವಿಚಾರಣೆ ಮಾಡಲು ಜಿ.ಪಿ.ಎಸ್ ಅಳವಡಿಸಿದ್ದು, ಪ್ರತಿಯೊಬ್ಬ ಪೌರಕಾರ್ಮಿಕರು ಅವರವರಿಗೆ ಹಂಚಿಕೆ ಮಾಡಿದ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಆ ಭಾಗಗಳ ಸೂಪರ್‌ವೈಸರ್‌ಗಳು ಕೆಲಸದ ಸ್ಥಳದ ಫೋಟೋಗಳನ್ನು ಅಪ್‌ಲೋಡ್ ಮಾಡಲಾಗುತ್ತಿದ್ದು, ಪ್ರತಿಯೊಬ್ಬ ಪೌರಕಾರ್ಮಿಕರ ಕೆಲಸ ನಿರ್ವಹಣೆಯನ್ನು ಜಿ.ಪಿ.ಎಸ್ ಆಧಾರಿತ ಸಾಫ್ಟ್‌ವೇರ್ ಮೂಲಕ ಮಹಾನಗರಪಾಲಿಕೆ ಕಚೇರಿಯಲ್ಲಿನ ನಿಯಂತ್ರಣ ಕೊಠಡಿಯಲ್ಲಿ ಉಸ್ತುವಾರಿ ಮಾಡಲಾಗುತ್ತಿದೆ.

## 3. ಪಂಜಾಬ್ ಸಫಾಯಿ ಕರ್ಮಚಾರಿ ಆಯೋಗಕ್ಕೆ ಭೇಟಿ:

ಅಧ್ಯಯನ ತಂಡ ಪಂಜಾಬ್ ಸಫಾಯಿ ಕರ್ಮಚಾರಿ ಆಯೋಗಕ್ಕೆ ಭೇಟಿ ನೀಡಲಾಯಿತು. ದಿನಾಂಕ 15/ 12/ 2016 ರಿಂದ ಅಧಿಸೂಚನೆ ಹೊರಡಿಸಿ ಸಫಾಯಿ ಕರ್ಮಚಾರಿ ಆಯೋಗವನ್ನು ಪ್ರಾರಂಭಿಸಲಾಗಿರುತ್ತದೆ. ಸಫಾಯಿ ಕರ್ಮಚಾರಿ ಆಯೋಗದಲ್ಲಿ ಮಾನ್ಯ ಅಧ್ಯಕ್ಷರು **The Punjab Ad-hoc, Contractual Daily Wage, Temporary, Work Charged and Outsourced Employees' Welfare Act, 2016** ಅನ್ನು ದಿನಾಂಕ 24/ 12/ 2016 ರಂದು ಅಧಿಸೂಚಿಸಲಾಗಿದೆ (ಅನುಬಂಧ–1ರಲ್ಲಿ ಲಗತ್ತಿಸಿದೆ). ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿರುವುದರಿಂದ ಮುಖ್ಯ ಕಾರ್ಯದರ್ಶಿಗಳ ಜೊತೆ ಚರ್ಚಿಸಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವುದಾಗಿ ಮಾಹಿತಿ ನೀಡಿರುತ್ತಾರೆ.

ಪಂಜಾಬ್ ರಾಜ್ಯವು ಅಧಿಸೂಚನೆ ಹೊರಡಿಸಿರುವ **The Punjab Ad-hoc, Contractual Daily Wage, Temporary, Work Charged and Outsourced Employees' Welfare Act, 2016** ರಲ್ಲಿ ಹೊರಸಂಪನ್ಮೂಲದಲ್ಲಿ ಏಜೆನ್ಸೀ ಮೂಲಕ ಕಾರ್ಯನಿರ್ವಹಿಸುತ್ತಿರುವ ಎ, ಬಿ, ಸಿ ಮತ್ತು ಡಿ ಗ್ರೂಪ್ ನೌಕರರನ್ನು ಖಾಯಂ ಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಪೌರಕಾರ್ಮಿಕರ ವೃಂದವು 'ಡಿ' ದರ್ಜೆಗೆ ಸಮಾನಾಂತರ ಹುದ್ದೆಯಾರುವುದರಿಂದ ಸದರಿ ಕಾಯ್ದೆಯಲ್ಲಿ ಹೊರಸಂಪನ್ಮೂಲ ಏಜೆನ್ಸಿಯ ಮೂಲಕ ಸೇವೆ ಪಡೆದು ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು 'ಡಿ' ಗ್ರೂಪ್ ನೌಕರರಿಗೆ ನಿಗಧಿಗೊಳಿಸಿರುವ ಮಾನದಂಡಗಳ ಆಧಾರದ ಮೇಲೆ ಖಾಯಂ ಗೊಳಿಸಲು ಕ್ರಮವಹಿಸಬಹುದಾಗಿರುತ್ತದೆ. ಮಾನದಂಡಗಳ ವಿವರ ಕೆಳಗಿನಂತಿದೆ.

i. ಡಿ ಗ್ರೂಪ್ ಹುದ್ದೆಗಳನ್ನು ನೇಮಿಸಿಕೊಳ್ಳವಾಗ ಒಬ್ಬ ವ್ಯಕ್ತಿಯು ಏಜೆನ್ಸಿ ಅಥವಾ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಕಾಯ್ದೆ ಅಧಿಸೂಚಿಸಿದ ದಿನಾಂಕದಿಂದ ಜಾರಿಗೆ ಬರುವಂತೆ 3 ವರ್ಷ ಸೇವಾ ಅವಧಿಯನ್ನು ಹೊರ ಸಂಪನ್ಮೂಲ ಏಜೆನ್ಸೀ ಮೂಲಕ ಅಥವಾ ದಿನಗೂಲಿಯಾಗಿ ಪೂರೈಸಿರಬೇಕು.

ii. ಡಿ ಗ್ರೂಪ್ ಹುದ್ದೆಗಳನ್ನು ನೇಮಿಸಿಕೊಳ್ಳುವಾಗ ಸಾಮಾನ್ಯ ವಯೋಮಿತಿಯಲ್ಲಿ ನೇಮಕಾತಿಯನ್ನು ಮಾಡಿಕೊಳ್ಳಬೇಕು.

iii. ಡಿ ಗ್ರೂಪ್ ಹುದ್ದೆಗಳನ್ನು ನೇಮಿಸಿಕೊಳ್ಳವಾಗ ವಿದ್ಯಾರ್ಹತೆಯನ್ನು ಮಾನದಂಡವಾಗಿ ವಿಧಿಸಿರುವುದಿಲ್ಲ.

iv. ಡಿ ಗ್ರೂಪ್ ಹುದ್ದೆಗಳನ್ನು ನೇಮಿಸಿಕೊಳ್ಳವಾಗ ಅವರ ಕೆಲಸದ ಅನುಭವ ಮತ್ತು ಉತ್ತಮ ನಡುವಳಿಕೆಯ ಪ್ರಮಾಣ ಪತ್ರವನ್ನು ತೆಗೆದುಕೊಳ್ಳಲಾಗುವುದು.

v. ಡಿ ಗ್ರೂಪ್ ಹುದ್ದೆಗಳನ್ನು ನೇಮಿಸಿಕೊಳ್ಳವಾಗ ಯಾವುದೇ ಸಿವಿಲ್ ಮತ್ತು ಕ್ರಿಮಿನಲ್ ದಾವೆಗಳು ದಾಖಲಾಗಿರಬಾರದು.

vi. ಡಿ ಗ್ರೂಪ್ ಹುದ್ದೆಗಳನ್ನು ನೇಮಿಸಿಕೊಳ್ಳವಾಗ ಕುಟುಂಬದ ವಾರ್ಷಿಕ ಆದಾಯವು ಕಡಿಮೆ ಇರಬೇಕು.

vii. ಡಿ ಗ್ರೂಪ್ ಹುದ್ದೆಗಳನ್ನು ನೇಮಿಸಿಕೊಳ್ಳುವಾಗ ಪೇ ಬಾಂಡ್ ಅಗ್ರಿಮೆಂಟ್‌ನ್ನು ಮಾಡಿಕೊಂಡು ಅಗ್ರಿಮೆಂಟ್‌ನಲ್ಲಿ ತಿಳಿಸಲಾಗಿರುವ ವೇತನವನ್ನು ಪಾವತಿಸಲಾಗುವುದೆಂದು ತಿಳಿಸಿರುತ್ತಾರೆ.

## 4. ಪಂಜಾಬ್ ರಾಜ್ಯದ ಅಮೃತಸರ ಮಹಾನಗರಪಾಲಿಕೆಗೆ ಭೇಟಿ:

ದಿನಾಂಕ 8/ 3/ 2017 ರಂದು ಬೆಳಗ್ಗೆ 11.00 ಗಂಟೆಗೆ ಅಮೃತಸರ ಮಹಾನಗರಪಾಲಿಕೆಯ ಪೂಜ್ಯ ಮಹಾಪೌರರು, ಮುಖ್ಯ ಸ್ಯಾನಿಟರಿ ಇನ್ಸ್‌ಪೆಕ್ಟರ್ ಮತ್ತು ಶ್ರೀ ಮಹಜನ್, ಪ್ರಾಜೆಕ್ಟ್ ಮ್ಯಾನೇಜರ್, ಎಸ್.ಡಬ್ಲ್ಯೂ.ಎಂ ರೊಂದಿಗೆ ಮಹಾನಗರಪಾಲಿಕೆಯ ಸಭಾಂಗಣದಲ್ಲಿ ಅಧ್ಯಯನ ತಂಡದ ಜೊತೆ ಸಭೆ ನಡೆಸಲಾಯಿತು. ಅಮೃತಸರ ನಗರದ ಜನಸಂಖ್ಯೆ 2011 ರ ಜನಗಣತಿ ಪ್ರಕಾರ 11 ಲಕ್ಷ ಇದ್ದು, ಪ್ರಸ್ತುತ 15 ಲಕ್ಷ ಜನಸಂಖ್ಯೆ ಇರುತ್ತದೆ. ಅಮೃತಸರವು ಪ್ರಸಿದ್ದ ಯಾತ್ರಾ ಮತ್ತು ಪ್ರವಾಸ ಸ್ಥಳವಾದ್ದರಿಂದ ಪ್ರತಿನಿತ್ಯ 1,50,000 ಪ್ರವಾಸಿಗರು ಭೇಟಿ ನೀಡುತ್ತಾರೆ. ಒಟ್ಟು 65 ವಾರ್ಡ್‌ಗಳಿದ್ದು, ಎಸ್.ಡಬ್ಲ್ಯೂ.ಎಂ ಕಂಪನಿಗೆ ತ್ಯಾಜ್ಯ ವಿಲೇವಾರಿ ಕಾರ್ಯವನ್ನು ಗುತ್ತಿಗೆ ನೀಡಲಾಗುತ್ತದೆ. ಸದರಿ ಕಂಪನಿಯವರು ಕೆಲಸಕ್ಕೆ ಅನುಗುಣವಾಗಿ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಾರೆ.

ಗುತ್ತಿಗೆ ಪೌರಕಾರ್ಮಿಕರಿಗೆ ಡಿ.ಸಿ. ರೇಟ್ (ಜಿಲ್ಲಾಧಿಕಾರಿಯವರು ನಿಗಧಿಸಪಿಡಿಸಿದ ಕನಿಷ್ಠ ವೇತನ ದರ) ಪ್ರಕಾರ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಗುತ್ತಿಗೆದಾರರಿಂದ ಬ್ಯಾಂಕ್ ಮೂಲಕ ವೇತನವನ್ನು ಗುತ್ತಿಗೆ ಕಾರ್ಮಿಕರಿಗೆ ಪಾವತಿಸಲಾಗುತ್ತಿರುತ್ತದೆ.

| ಹುದ್ದೆಯ ವಿವರ | ಸಂಖ್ಯೆ | ಷರಾ |
|---|---|---|
| ಖಾಯಂ ಪೌರಕಾರ್ಮಿಕರು | 1850 | ಖಾಯಂ ಪೌರಕಾರ್ಮಿಕರಿಗೆ ಡಿ ದರ್ಜೆಯ ನೌಕರರ ವೇತನ ಶ್ರೇಣಿಯಂತೆ ವೇತನ ಪಾವತಿಸಲಾಗುತ್ತಿದೆ. |
| ಹೊರಗುತ್ತಿಗೆ ಪೌರಕಾರ್ಮಿಕರು | 700 | ಎಸ್.ಡಬ್ಲ್ಯೂ.ಎಂ ಕಂಪನಿಯ ಮೂಲಕ ಪ್ರತಿ ತಿಂಗಳು ರೂ.10,700 ಗಳನ್ನು ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗುತ್ತಿದೆ. |

### ಸಫಾಯಿ ಕರ್ಮಚಾರಿಗಳ ನೇಮಕಾತಿ ಮತ್ತು ಕನಿಷ್ಠ ವೇತನದ ನೀಡುತ್ತಿರುವ ವೇತನದ ವಿವರ:

ಎಸ್.ಡಬ್ಲ್ಯೂ.ಎಂ ಕಂಪನಿಯ ಮೂಲಕ 5 ವರ್ಷಗಳ ಕಾಲ ಅಮೃತಸರ ಮಹಾನಗರಪಾಲಿಕೆ ವ್ಯಾಪ್ತಿಗೆ ಬರುವ ಎಲ್ಲಾ ರಸ್ತೆಗಳು ಹಾಗೂ ಇತರೆ ಎಲ್ಲಾ ತ್ಯಾಜ್ಯ ವಸ್ತುಗಳನ್ನು ಮತ್ತು ನಗರವನ್ನು ಸ್ವಚ್ಛಗೊಳಿಸಲು ಗುತ್ತಿಗೆಯನ್ನು ನೀಡಲಾಗಿರುತ್ತದೆ. ಗುತ್ತಿಗೆ ಪೌರಕಾರ್ಮಿಕರಿಗೆ ಡಿ.ಸಿ. ರೇಟ್ (ಜಿಲ್ಲಾಧಿಕಾರಿಯವರು ನಿಗಧಿಸಪಿಡಿಸಿದ ಕನಿಷ್ಠ ವೇತನ ದರ)

ಪ್ರಕಾರ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಗುತ್ತಿಗೆದಾರರಿಂದ ಬ್ಯಾಂಕ್ ಮೂಲಕ ವೇತನವನ್ನು ಗುತ್ತಿಗೆ ಕಾರ್ಮಿಕರಿಗೆ ಪಾವತಿಸಲಾಗುತ್ತಿರುತ್ತದೆ.

### ಸಫಾಯಿ ಕರ್ಮಚಾರಿಗಳಿಗೆ ಒದಗಿಸುತ್ತಿರುವ ವಿವಿಧ ಸೌಲಭ್ಯಗಳು:

- ಅಮೃತಸರ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಸಂಪನ್ಮೂಲ ಪೌರಕಾರ್ಮಿಕರಿಗೆ ವೇತನವನ್ನು ನೀಡಲು ಆಯವ್ಯಯದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.
- ಅಮೃತಸರ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಬ್ಬ ಪೌರಕಾರ್ಮಿಕರಿಗೆ 500 ಮೀಟರ್ ಉದ್ದದ ಪ್ರದೇಶವನ್ನು ಸ್ವಚ್ಛತೆ ಮಾಡಲು ನೀಡಲಾಗುವುದು.
- ಹೊರಗುತ್ತಿಗೆದಾರರ ಮೂಲಕ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ 610 ಜನಕ್ಕೆ ಒಬ್ಬ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿರುತ್ತದೆ.
- ಎಸ್.ಡಬ್ಲ್ಯೂ.ಎಂ ಕಂಪನಿಯ ಜೊತೆ 5 ವರ್ಷಗಳ ಕಾಲ ಒಪ್ಪಂದ ಮಾಡಿಕೊಂಡು ಕಂಪನಿಯ ಮೂಲಕ ವೇತನವನ್ನು ಹಾಗೂ ಇ.ಎಸ್.ಐ ಮತ್ತು ಪಿ.ಎಫ್.ನ್ನು ಪ್ರತೀ ತಿಂಗಳು ಪೌರಕಾರ್ಮಿಕರಿಗೆ ಗುತ್ತಿಗೆದಾರರ ಮೂಲಕ ಪಾವತಿಸಲಾಗುತ್ತಿದೆ.
- ಗುತ್ತಿಗೆ ಪೌರಕಾರ್ಮಿಕರಿಗೆ ಗುತ್ತಿಗೆದಾರರಿಂದ ಸುರಕ್ಷತಾ ಸಾಮಾಗ್ರಿಗಳಾದ ಹ್ಯಾಂಡ್ ಗ್ಲೌಸ್, ಗಂಬೂಟ್ಸ್, ಮಾಸ್ಕ್, ಏಪ್ರನ್ ಎಲ್ಲರಿಗೂ ನೀಡಲಾಗುತ್ತಿರುತ್ತದೆ.
- ಪ್ರತೀ ದಿನ 8 ಗಂಟೆಗಳ ಕಾಲ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ನಗರದ ಮುಖ್ಯ ರಸ್ತೆಗಳನ್ನು ವಾರದಲ್ಲಿ ಮೂರು ದಿನಗಳಿಗೊಮ್ಮೆ ಸ್ವಚ್ಛಗೊಳಿಸಲಾಗುತ್ತಿರುತ್ತದೆ.
- ಪೌರಕಾರ್ಮಿಕರನ್ನು ತೆಗೆದುಕೊಳ್ಳುವಾಗ ಅವರಿಗೆ 4ನೇ ತರಗತಿ ಪಾಸಾಗಿರಬೇಕೆಂದು ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ.
- ಹೊರಸಂಪನ್ಮೂಲ ಪೌರಕಾರ್ಮಿಕರಿಗೆ ಸಮವಸ್ತ್ರ ಶುಭ್ರತೆಗಾಗಿ ಪ್ರತಿ ತಿಂಗಳು ರೂ.40 ಪಾವತಿಸಲಾಗುವುದು.
- ಅಮೃತಸರ ಮಹಾನಗರಪಾಲಿಕೆಯಲ್ಲಿ ಖಾಯಂ ಪೌರಕಾರ್ಮಿಕರಿಗೆ ಡಿ ಗ್ರೂಪ್ ನೌಕರರಿಗೆ ಇರುವ ಎಲ್ಲಾ ಆರೋಗ್ಯದ ಚಿಕಿತ್ಸೆ ವೆಚ್ಚವನ್ನು ಪಾವತಿಸುತ್ತಿರುವ ರೀತಿಯೇ ಪಾವತಿಸಲಾಗುತ್ತದೆ. ಗುತ್ತಿಗೆ ಪೌರಕಾರ್ಮಿಕರಿಗೆ ಗುತ್ತಿಗೆದಾರರು ಪ್ರತೀ ವರ್ಷ ಆರೋಗ್ಯ ತಪಾಸಣೆಯನ್ನು ಮಾಡಿಸಲಾಗುತ್ತಿದೆ.

## 5. ಹರಿಯಾಣ ರಾಜ್ಯದ ಪಂಚಕುಲ ಮಹಾನಗರಪಾಲಿಕೆಗೆ ಭೇಟಿ:

ಹರಿಯಾಣ ರಾಜ್ಯದ ಪಂಚಕುಲ ಮಹಾನಗರಪಾಲಿಕೆಗೆ ದಿನಾಂಕ 7/ 3/ 2017 ರಂದು ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀ ಲಲಿತ್ ಶಿವಾಚ್, ಹೆಚ್.ಸಿ.ಎಸ್,

ಮಹಾನಗರಪಾಲಿಕೆಯ ಆಯುಕ್ತರು ಮತ್ತು ಶ್ರೀ ವೇದಪ್ರಕಾಶ್, ಸ್ಯಾನಿಟರಿ ಇನ್ಸ್‌ಪೆಕ್ಟರ್ ಹಾಜರಿದ್ದು, ಈ ಕೆಳಕಂಡ ಮಾಹಿತಿಯನ್ನು ನೀಡಿರುತ್ತಾರೆ.

ಸ್ಯಾನಿಟರಿ ಇನ್ಸ್‌ಪೆಕ್ಟರ್ ರವರು ಸಭೆಯಲ್ಲಿ ಮಹಾನಗರಪಾಲಿಕೆಯಲ್ಲಿ 39 ಜನ ಖಾಯಂ ಪೌರಕಾರ್ಮಿಕರು ಹಾಗೂ ನೇರವಾಗಿ ಮಹಾನಗರಪಾಲಿಕೆಯಿಂದ 607 ಗುತ್ತಿಗೆ ಪೌರಕಾರ್ಮಿಕರಿಗೆ ವೇತನವನ್ನು ಪಾವತಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ. ಪಂಚಕುಲನ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 6 ಲಕ್ಷ ಜನಸಂಖ್ಯೆ ಇರುತ್ತದೆ.

ಸಾರ್ವಜನಿಕ ಸ್ಥಳಗಳಾದ ರಸ್ತೆ, ಬೀದಿ, ಉದ್ಯಾನ, ಆಟದ ಮೈದಾನಗಳು, ಚರಂಡಿಗಳು ಹಾಗೂ ಪಾದಚಾರಿ ರಸ್ತೆಗಳನ್ನು ಸ್ವಚ್ಛಗೊಳಿಸುವಾಗ ಸ್ಥಳೀಯ ಸಂಸ್ಥೆಗಳಿಂದ ಪ್ರತೀ 4 ವಾರ್ಡ್‌ಗಳಿಗೆ ಸೂಪರ್‌ವೈಸರ್‌ನ್ನು ಮೇಲುಸ್ತುವಾರಿಗಾಗಿ ನೇಮಿಸಲಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮನೆ ಮನೆ ಕಸವನ್ನು ತ್ಯಾಜ್ಯ ಸಂಗ್ರಹಗಾರರು **(Rag Pickers)** ಸಂಗ್ರಹಿಸುತ್ತಾರೆ ಆದರೆ ಇವರಿಗೆ ಸ್ಥಳೀಯ ಸಂಸ್ಥೆಗಳಿಂದ ಯಾವುದೇ ವೇತನ ಮತ್ತಿತ್ತರೇ ಸೌಲಭ್ಯಗಳನ್ನು ನೀಡುವುದಿಲ್ಲ.

| ಹುದ್ದೆಯ ವಿವರ | ಸಂಖ್ಯೆ | ಷರಾ |
|---|---|---|
| ಖಾಯಂ ಪೌರಕಾರ್ಮಿಕರು | 39 | ಖಾಯಂ ಪೌರಕಾರ್ಮಿಕರಿಗೆ ಡಿ ದರ್ಜೆಯ ನೌಕರರ ವೇತನ ಶ್ರೇಣಿಯಂತೆ ವೇತನ ಪಾವತಿಸಲಾಗುತ್ತಿದೆ. |
| ನಗರ ಸ್ಥಳೀಯ ಸಂಸ್ಥೆಗಳಿಂದ ನೇರವಾಗಿ ವೇತನ ಪಾವತಿಸು ತ್ತಿರುವ ಪೌರಕಾರ್ಮಿಕರ ಸಂಖ್ಯೆ | 607 | ಪಂಚಕುಲ ಮಹಾನಗರಪಾಲಿಕೆಯಿಂದ ನೇರವಾಗಿ ಆರ್.ಟಿ.ಜಿ.ಎಸ್ ಮೂಲಕ ಪೌರಕಾರ್ಮಿಕರ ಖಾತೆಗೆ ವೇತನವನ್ನು ಪಾವತಿಸಲಾಗುತ್ತಿರುತ್ತದೆ. |

**ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಮಹಾನಗರಪಾಲಿಕೆವತಿಯಿಂದ ನೇರವಾಗಿ ಪೌರಕಾರ್ಮಿಕರಿಗೆ ವೇತನ ಪಾವತಿಸುತ್ತಿರುವ ಬಗ್ಗೆ:**

1. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರ ಸಂಪನ್ಮೂಲದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಕೆಲಸವನ್ನು ಗಮನದಲ್ಲಿಟ್ಟುಕೊಂಡು ಹರಿಯಾಣ ರಾಜ್ಯದ ಅಂದಿನ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 10/ 11/ 2013

ರಂದು ಹೊರ ಸಂಪನ್ಮೂಲದ ಮೂಲಕ ಪೌರಕಾರ್ಮಿಕರ ಸೇವೆ ಪಡೆಯುವುದನ್ನು ರದ್ದುಗೊಳಿಸಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾಗಿರುವ ಪೌರಕಾರ್ಮಿಕ ಹುದ್ದೆಗಳ ಎದುರಾಗಿ ಖಾಲಿ ಇರುವ ಸಫಾಯಿ ಕರ್ಮಚಾರಿಗಳ ಹುದ್ದೆಗಳಿಗೆ ಸಫಾಯಿ ಕರ್ಮಚಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ನೇರವಾಗಿ ಸ್ಥಳೀಯ ಸಂಸ್ಥೆಗಳ ಅನುದಾನದಿಂದ ವೇತನವನ್ನು ಪಾವತಿಸಲು ಘೋಷಣೆ ಮಾಡಿರುತ್ತಾರೆ (ಅನುಬಂಧ–2ರಲ್ಲಿ ಲಗತ್ತಿಸಿದೆ).

2. ಸದರಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ದಿನಾಂಕ 1/ 7/ 2014 ರಂದು ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ನಗರ ಸ್ಥಳೀಯ ಸಂಸ್ಥೆಗಳಿಂದ ನೇರವಾಗಿ ವೇತನವನ್ನು ನೀಡಲು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಇಲಾಖೆಗೆ ಆದೇಶ ಹೊರಡಿಸಿರುತ್ತಾರೆ. (ಆದೇಶ ಸಂಖ್ಯೆ: 16/ 15/ 2014–2.ಸಿ1, ದಿನಾಂಕ 26/ 6/ 2014) (ಅನುಬಂಧ–2ರಲ್ಲಿ ಲಗತ್ತಿಸಿದೆ).
3. ನಗರ ಸ್ಥಳೀಯ ಸಂಸ್ಥೆಯಿಂದ ನೇರವಾಗಿ ಪೌರಕಾರ್ಮಿಕರನ್ನು ನೇಮಿಸಿಕೊಳ್ಳುವಾಗ 400 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರನ್ನು ನೇಮಿಸಿಕೊಂಡು ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲದಿಂದ ವೇತನವನ್ನು ನೀಡುತ್ತಿರುವುದಾಗಿ ತಿಳಿಸಿರುತ್ತಾರೆ.
4. ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರವಾಗಿ ಪೌರಕಾರ್ಮಿಕರನ್ನು ನೇಮಿಸಿಕೊಂಡು ಪ್ರತೀ ಒಬ್ಬ ಪೌರಕಾರ್ಮಿಕರಿಗೂ ವೇತನದ ಜೊತೆಗೆ ಸಂಕಷ್ಟ ಭತ್ಯೆ ರೂ.2000/– ಗಳನ್ನು ನೀಡಲಾಗುತ್ತಿದೆ.
5. ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರವಾಗಿ ಪೌರಕಾರ್ಮಿಕರನ್ನು ನೇಮಿಸಿಕೊಂಡು ಪ್ರತೀ ವರ್ಷ ಪತ್ರಿಯೊಬ್ಬ ಕಾರ್ಮಿಕರಿಗೂ ಎರಡು ಜೊತೆ ಸಮವಸ್ತ್ರಗಳು ಮತ್ತು ಸುರಕ್ಷತಾ ಸಾಮಗ್ರಿಗಳನ್ನು ನೀಡಲಾಗುತ್ತಿದೆ.
6. ಹರಿಯಾಣ ರಾಜ್ಯದ ಅಪರ ಮುಖ್ಯ ಕಾರ್ಯದರ್ಶಿಗಳು ನಗರ ಸ್ಥಳೀಯ ಸಂಸ್ಥೆಗಳ ಇಲಾಖೆ ದಿನಾಂಕ 26/ 6/ 2014 ರಂದು ಹೊರಡಿಸಿರುವ ಪತ್ರದಲ್ಲಿ (ಅನುಬಂಧ–2ರಲ್ಲಿ ಲಗತ್ತಿಸಿದೆ) ಹರಿಯಾಣ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾಗಿರುವ ಪೌರಕಾರ್ಮಿಕ ಹುದ್ದೆಗಳ ಎದುರಾಗಿ ಖಾಲಿ ಇರುವ ಸಫಾಯಿ ಕರ್ಮಚಾರಿಗಳ ಹುದ್ದೆಗಳಿಗೆ ಸಫಾಯಿ ಕರ್ಮಚಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ನೇರವಾಗಿ ಸ್ಥಳೀಯ ಸಂಸ್ಥೆಗಳ ಅನುದಾನದಿಂದ ವೇತನ ಪಾವತಿಸಲಾಗುತ್ತದೆ.

## ಸಫಾಯಿ ಕರ್ಮಚಾರಿಗಳಿಗೆ ಒದಗಿಸುತ್ತಿರುವ ವಿವಿಧ ಸೌಲಭ್ಯಗಳು:

- ನಗರ ಸ್ಥಳೀಯ ಸಂಸ್ಥೆಗಳಿಂದಲೇ ನೇರವಾಗಿ ಆರ್.ಟಿ.ಜಿ.ಎಸ್ ಮೂಲಕ ಮಾಸಿಕ ವೇತನ ವಿತರಣೆ.
- ಕಾರ್ಮಿಕ ಆರೋಗ್ಯ ವಿಮೆ ಮತ್ತು ಭವಿಷ್ಯ ನಿಧಿಯನ್ನು ನೇರವಾಗಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಲಾಗುತ್ತಿದೆ.
- ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ಶಿಬಿರಗಳ ಮೂಲಕ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ.

- ಪ್ರತಿ ತಿಂಗಳು ರೂ.70 ಅನ್ನು ಪೊರಕೆ & ಇತರೆ ಸಾಮಗ್ರಿಗಳಿಗಾಗಿ ನೀಡಲಾಗುತ್ತಿದೆ.
- ಪ್ರತೀವರ್ಷ ಎರಡು ಬಾರಿ ಸಮವಸ್ತ್ರ ನೀಡಲಾಗುತ್ತಿದೆ.
- ಅಗತ್ಯ ಸುರಕ್ಷತಾ ಸಲಕರಣೆಗಳನ್ನು ನೀಡಲಾಗುತ್ತಿದೆ.
- ವಾರ್ಷಿಕ 10 ದಿನಗಳ ಸಿ.ಎಲ್. ರಜೆ, 10 ದಿನಗಳ ವೈದ್ಯಕೀಯ ರಜೆ ಹಾಗೂ ವಾರದಲ್ಲಿ ಒಂದು ದಿನ ವಿಶ್ರಾಂತಿ ರಜೆ ಇವೆಲ್ಲವೂ ವೇತನ ಸಹಿತ ರಜೆಗಳಾಗಿವೆ.
- ಪೌರಕಾರ್ಮಿಕರು ಸಾರ್ವಜನಿಕ ರಜಾದಿನಗಳಲ್ಲಿ ಕಾರ್ಯನಿರ್ವಹಿಸಿದರೆ ಮರುದಿನ ರಜೆ ನೀಡಲಾಗುತ್ತಿದೆ.
- ಬಹುತೇಕ ಪೌರಕಾರ್ಮಿಕ ಪರಿಶಿಷ್ಟ ಜಾತಿಯ ವಾಲ್ಮೀಕಿ ಸಮುದಾಯದವರೇ ಈ ವೃತ್ತಿಯಲ್ಲಿ ತೊಡಗಿರುತ್ತಾರೆ.

## ಉತ್ತಮ ಪದ್ಧತಿಗಳು (Best Practices):

ಪೌರಕಾರ್ಮಿಕರನ್ನು ಒಂದು ವರ್ಷದ ಒಪ್ಪಂದದ ಮೇರೆಗೆ ನೇರ ನೇಮಕಾತಿ ಮಾಡಿಕೊಂಡು ನಗರ ಸ್ಥಳೀಯ ಸಂಸ್ಥೆಗಳೇ ವೇತನವನ್ನು ಆರ್.ಟಿ.ಜಿ.ಎಸ್. ಮೂಲಕ ನೀಡುತ್ತಿರುವ ಪದ್ದತಿ ಜಾರಿಯಲ್ಲಿದೆ. ಒಂದು ವರ್ಷ ಅವಧಿ ಮುಗಿದ ನಂತರ ಒಂದು ದಿವಸ ಸೇವಾ ಕಡಿತ ಮಾಡಿ ಅದೇ ಪೌರಕಾರ್ಮಿಕರನ್ನು ಮುಂದಿನ ವರ್ಷಕ್ಕೆ ನವೀಕರಿಸಿಕೊಂಡು, ನೇಮಕಾತಿ ಮಾಡಿಕೊಂಡು ನೇರವಾಗಿ ವೇತನವನ್ನು ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲಾಗುತ್ತಿದೆ.

ಪೌರಕಾರ್ಮಿಕರನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ನೇರವಾಗಿ ವೇತನವನ್ನು ನೀಡಲು ನೇಮಕಾತಿ ಮಾಡಿಕೊಳ್ಳುವಾಗ ಯಾವುದೇ ವಯೋಮಿತಿ ಮತ್ತು ವಿದ್ಯಾರ್ಹತೆಯನ್ನು ಮಾನದಂಡವಾಗಿ ಪರಿಗಣಿಸಿಲ್ಲ.

## ಆಧಾರಿತ ಅಂಶಗಳು ಮತ್ತು ದಾಖಲೆಗಳು:

1. ಪಂಜಾಬ್ ರಾಜ್ಯದಲ್ಲಿ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂ ನೌಕರರನ್ನಾಗಿ ನೇಮಕಾತಿ ಮಾಡಿಕೊಳ್ಳಲು ರಾಜ್ಯ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ, ಗುತ್ತಿಗೆ, ದಿನಗೂಲಿ, ಹೊರಗುತ್ತಿಗೆ ನೌಕರರ ಕಲ್ಯಾಣ ಕಾಯ್ದೆ 2016 (ಪಂಜಾಬ್ ಕಾಯ್ದೆ ನಂ 55–2016) ಎಂಬ ಕಾಯ್ದೆಯನ್ನು 24 ಡಿಸೆಂಬರ್ 2016 ರಂದು ವಿಧಾನಸಭೆಯಲ್ಲಿ ಮಂಡಿಸಿ ಅನುಮೋದನೆ ಮಾಡಿದೆ. ಈ ಕಾಯ್ದೆ ಅನುಸಾರ ಮೇಲೆ ತಿಳಿಸಿದ ಎಲ್ಲಾ ನೌಕರರನ್ನು ಖಾಯಂ ಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ (ಅನುಬಂಧ–1ರಲ್ಲಿ ಲಗತ್ತಿಸಿದೆ).

2. ಹರಿಯಾಣ ಸರ್ಕಾರದ ಮೆಮೋ ಸಂಖ್ಯೆ: 16/ 15/ 2014–2.ಸಿ1, ದಿನಾಂಕ 26/ 6/ 2014ರಲ್ಲಿ ಗುತ್ತಿಗೆ ಪದ್ದತಿಯನ್ನು ರದ್ದುಗೊಳಿಸಿ ಪೌರಕಾರ್ಮಿಕರನ್ನು ಒಂದು

ವರ್ಷದ ಒಪ್ಪಂದದ ಮೇರೆಗೆ ನೇರ ನೇಮಕಾತಿ ಮಾಡಿಕೊಂಡು ನಗರ ಸ್ಥಳೀಯ ಸಂಸ್ಥೆಗಳೇ ವೇತನವನ್ನು ಆರ್.ಟಿ.ಜಿ.ಎಸ್. ಮೂಲಕ ನೀಡುತ್ತಿರುವ ಪದ್ದತಿ ಜಾರಿಯಲ್ಲಿದೆ. ಒಂದು ವರ್ಷ ಅವಧಿ ಮುಗಿದ ನಂತರ ಪ್ರತೀ ವರ್ಷ ಪೌರಕಾರ್ಮಿಕರನ್ನು ಒಂದು ದಿವಸ ಸೇವಾಕಡಿತ ಮಾಡಿ ನವೀಕರಿಸಿ ಮುಂದಿನ ವರ್ಷಗಳಲ್ಲಿ ಮುಂದುವರೆಸಿಕೊಂಡು ನೇಮಕಾತಿ ಮಾಡಿಕೊಂಡು ನೇರವಾಗಿ ವೇತನವನ್ನು ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲಾಗುತ್ತಿದೆ. (ಅನುಬಂಧ–2ರಲ್ಲಿ ಲಗತ್ತಿಸಿದೆ).

3. ಕರ್ನಾಟಕ ಸರ್ಕಾರವು ಸಹ ದಿನಾಂಕ 3/ 5/ 2016 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಪೌರಕಾರ್ಮಿಕರು ನಿರ್ವಹಿಸುತ್ತಿರುವ ನೈರ್ಮಲ್ಯ ಕಾರ್ಯವನ್ನು ಗಮನದಲ್ಲಿಟ್ಟುಕೊಂಡು ಇಲಾಖೆಯು ಹೊರಗುತ್ತಿಗೆ ಪದ್ದತಿಯನ್ನು ರದ್ದುಗೊಳಿಸಿ ವಿಶೇಷ ನೇಮಕಾತಿ ನಿಯಮವನ್ನು ರಚಿಸಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಮಾರ್ಚ್–31, 2017 ರೊಳಗೆ ಈ ನಿಯಮದಡಿಗಳಲ್ಲಿ ನೇಮಕಾತಿ ಮಾಡಿಕೊಳ್ಳಬೇಕೆಂದು ಸಚಿವ ಸಂಪುಟವು ನಿರ್ಧರಿಸಿರುತ್ತದೆ.

4. The Punjab Ad-hoc, Contractual Daily Wage, Temporary, Work Charged and Outsourced Employees' Welfare Act, 2016ರ ಕಾಯ್ದೆಯಲ್ಲಿ ಹೊರಗುತ್ತಿಗೆ ಮೇಲೆ ಕೆಲಸ ಮಾಡುತ್ತಿರುವ ಡಿ ಗ್ರೂಪ್ ನೌಕರರನ್ನು ಖಾಯಂ ಗೊಳಿಸಲು ತೀರ್ಮಾನಿಸಿ ನಿಗಧಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಹೊರ ಸಂಪನ್ಮೂಲದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ಗೊಳಿಸಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಬೇಕಾಗಿರುತ್ತದೆ.

5. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 213/ 2013ರಲ್ಲಿನ ತೀರ್ಪಿನ ಪ್ರಕಾರ ಮತ್ತು ಗುತ್ತಿಗೆ ಕಾರ್ಮಿಕ (ರದ್ಧತಿ ಮತ್ತು ನಿಯಂತ್ರಣ) ಅಧಿನಿಯಮ, 1971 ರ ಕಲಂ 10(ಎ) ಪ್ರಕಾರ ಅಗತ್ಯ ಸೇವೆಗಳ ಅನುಗುಣವಾಗಿ ಗುತ್ತಿಗೆ ಕಾರ್ಮಿಕರ ನೇಮಕಾತಿಯನ್ನು ರದ್ದು ಪಡಿಸುವ ಮೊದಲು ಸರ್ಕಾರವು ಪರಿಗಣಿಸಬೇಕಾದ ಕಡ್ಡಾಯ ಅಂಶಗಳನ್ನು ಸೂಚಿಸಿದೆ. ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ನೇರವಾಗಿ ವೇತನ ನೀಡಬೇಕೆಂದು ಕಾಯ್ದೆಯು ತಿಳಿಸುತ್ತದೆ. (ಅನುಬಂಧ–3ರಲ್ಲಿ ಲಗತ್ತಿಸಿದೆ).

6. ಗುಜರಾತ್ ಎಲೆಕ್ಟ್ರಿಸಿಟಿ ಬೋರ್ಡ್ ವಿ/– ಹಿಂದ್ ಮಜ್ದೂರ್ ಸಭಾ & ಇತರರು (1995 11 ಐಎ 790) ಪ್ರಕರಣಕ್ಕೆ ಸಂಬಂಧಪಟ್ಟಂತೆ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸಾರ್ವಜನಿಕ ಉದ್ದಿಮೆಗಳ ಕಾಯ್ದೆಯ ಸೆಕ್ಷನ್ 10(2)ರ ಅಡಿಯಲ್ಲಿ (ಎ) ಯಿಂದ (ಡಿ) ವರೆಗಿನ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ನೇಮಕ ಮಾಡಿಕೊಂಡಿರುವ ಎಲ್ಲಾ ಸ್ಥಳೀಯ ಸಂಸ್ಥೆಗಳು ತಂತಾನೆ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಿ ಆ ಕಾರ್ಮಿಕರನ್ನು ಸಾಧ್ಯವಾದಷ್ಟು ಖಾಯಂ ಗೊಳಿಸಬೇಕಾಗಿರುತ್ತದೆ ಎಂದು ಆದೇಶಿಸಲಾಗಿರುತ್ತದೆ (ಅನುಬಂಧ–4ರಲ್ಲಿ ಲಗತ್ತಿಸಿದೆ).

7. ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ ಕಲಂ 92–ಡಿ, ಶೆಡ್ಯೂಲ್ಡ್–II ರಲ್ಲಿ ಸಫಾಯಿ ಕರ್ಮಚಾರಿಗಳು ಮಾಡುವ ಎಲ್ಲಾ ಕೆಲಸಗಳನ್ನು ಅವಶ್ಯಕ ಸೇವೆಗಳೆಂದು ಪರಿಗಣಿಸಲಾಗಿರುತ್ತದೆ. ಪೌರಕಾರ್ಮಿಕರು ಮಾಡುತ್ತಿರುವ ಕೆಲಸವು ಸ್ಥಳೀಯ ನಗರ ಸಂಸ್ಥೆಗಳ ಕಡ್ಡಾಯ ಕಾರ್ಯ ಹಾಗೂ ಅವಶ್ಯಕ ಸೇವೆ ಎಂದು ಪರಿಗಣಿಸಲಾಗಿರುತ್ತದೆ.

8. ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ವಿಭಾಗೀಯ ಪೀಠದ ತೀರ್ಪಿನ ಅಂಶಗಳು (ರಿಟ್ ಅರ್ಜಿ ಸಂಖ್ಯೆ: 112397 / 2015 ಮತ್ತು 112424 / 2015).

9. ಮೈಸೂರು ಮಾಜಿ ಮೇಯರ್‌ರಾದ ಶ್ರೀ ನಾರಯಣರವರು ರಾಜ್ಯದ ಉಚ್ಚನ್ಯಾಯಲಯದಲ್ಲಿ ನೊಂದಾಯಿಸಿದ್ದ ರಿಟ್ ಅರ್ಜಿಗೆ ಕೇಸ್ ನಂ. 6059 ಗೆ ನ್ಯಾಯಾಲಯದ ನೀಡಿರುವ ನಿರ್ದೇಶನ.

## <u>ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿನ ಪೌರಕಾರ್ಮಿಕರ ಸ್ಥಿತಿಗತಿಗಳ ಕ್ಷೇತ್ರ ಅಧ್ಯಯನ ತಂಡದ ಶಿಫಾರಸ್ಸುಗಳು:</u>

1. ಗುತ್ತಿಗೆ ಕಾರ್ಮಿಕ (ರದ್ಧತಿ ಮತ್ತು ನಿಯಂತ್ರಣ) ಅಧಿನಿಯಮ, 1971 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ನೀಡಿರುವ ಆದೇಶಗಳಂತೆ ಘನ ಕರ್ನಾಟಕ ಸರ್ಕಾರವು ದಿನಾಂಕ 3/ 5/ 2016 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಪೌರಕಾರ್ಮಿಕರು ನಿರ್ವಹಿಸುತ್ತಿರುವ ನೈರ್ಮಲ್ಯ ಕಾರ್ಯವನ್ನು ಗಮನದಲ್ಲಿಟ್ಟುಕೊಂಡು ಹೊರಗುತ್ತಿಗೆ ಪದ್ದತಿಯನ್ನು ರದ್ದುಗೊಳಿಸಿ ವಿಶೇಷ ನೇಮಕಾತಿ ನಿಯಮ ರಚಿಸಿ ಪೌರಕಾರ್ಮಿಕರನ್ನು ಹಂತ ಹಂತವಾಗಿ ಖಾಯಂಗೊಳಿಸಲು ಹಾಗೂ ಈ ಸಂಬಂಧ ಪ್ರಕ್ರಿಯೆಯನ್ನು ಮಾರ್ಚ್–31, 2017 ರೊಳಗೆ ಪೂರ್ಣಗೊಳಿಸಲು ತೀರ್ಮಾನಿಸಿದಂತೆ ಕೂಡಲೇ ಕ್ರಮ ವಹಿಸುವಂತೆ ತಂಡವು ಶಿಫಾರಸ್ಸು ಮಾಡುತ್ತದೆ.

2. ಈ ರೀತಿ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳುವಾಗ ಪ್ರಸ್ತುತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಚತಾ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ, ಗುತ್ತಿಗೆ, ಹೊರಗುತ್ತಿಗೆ ಮತ್ತು ಇತರೆ ತಾತ್ಕಾಲಿಕ ನೌಕರರಿಗೆ ಪ್ರಥಮ ಆಧ್ಯತೆ ನೀಡಿ ನೇಮಕಾತಿ ಮಾಡಿಕೊಳ್ಳುವುದು.

3. ಪ್ರಸ್ತುತ ರಾಜ್ಯದಲ್ಲಿ ಪೌರಕಾರ್ಮಿಕರ ಸಂಖ್ಯೆಯು ಜನ ಸಂಖ್ಯೆ ಪ್ರಮಾಣಕ್ಕೆ ಹೋಲಿಸಿದಾಗ ಪೌರಕಾರ್ಮಿಕರ ಮೇಲೆ ಹೆಚ್ಚಿನ ಕೆಲಸದ ಒತ್ತಡ ಇರುತ್ತದೆ.

ಆದುದರಿಂದ, ಪೌರಕಾರ್ಮಿಕರ ಸಂಖ್ಯೆಯನ್ನು ಪ್ರತಿ 500 ಸಂಖ್ಯೆಗೆ ಒಬ್ಬರನ್ನು ನಿಗಧಿಪಡಿಸುವುದು.

4. ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪೌರ ಕಾರ್ಮಿಕರ ಹೊರಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ಹರಿಯಾಣ ರಾಜ್ಯದ ಮಾದರಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಮೂಲಕ ಸೇರಿದಂತೆ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳನ್ನು ಮಂಜೂರಾಗಿರುವ ಪೌರಕಾರ್ಮಿಕ ಹುದ್ದೆಗಳ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಸ್ಥಳೀಯ ಸಂಸ್ಥೆಗಳ ಮೂಲಕ ವೇತನವನ್ನು ನೇರವಾಗಿ ಪೌರಕಾರ್ಮಿಕರ ಬ್ಯಾಂಕ್ ಖಾತೆಗೆ ಜಮಾ ಮಾಡಲು ಹಾಗೂ ಇ.ಪಿ.ಎಫ್. ಮೊತ್ತವನ್ನು ನೇರವಾಗಿ ಕಾರ್ಮಿಕರ ಇ.ಪಿ.ಎಫ್. ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳುವಂತೆ ತಂಡವು ಶಿಫಾರಸ್ಸು ಮಾಡುತ್ತದೆ.

ಎಂ.ಆರ್. ವೆಂಕಟೇಶ
ಅಧ್ಯಕ್ಷರು
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ

ನಾರಾಯಣ
ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ
ಸಫಾಯಿ ಕರ್ಮಚಾರಿಗಳ ಆಯೋಗ

ಗೋಕುಲ ನಾರಾಯಣ ಸ್ವಾಮಿ,
ಸದಸ್ಯರು, ಕರ್ನಾಟಕ ರಾಜ್ಯ ಸಫಾಯಿ
ಕರ್ಮಚಾರಿಗಳ ಆಯೋಗ

ಡಾ.ಹೆಚ್. ನಟರಾಜ್
ಕಾರ್ಯದರ್ಶಿ, ಕರ್ನಾಟಕ ರಾಜ್ಯ
ಸಫಾಯಿ ಕರ್ಮಚಾರಿಗಳ ಆಯೋಗ

ಎ. ಬಸವರಾಜು,
ಜಂಟಿ ನಿರ್ದೇಶಕರು (ಆಡಳಿತ),
ಪೌರಾಡಳಿತ ನಿರ್ದೇಶನಾಲಯ

ಎಂ.ಸಿ. ಸೋಮೇಶ್
ಕಾರ್ಯಪಾಲಕ ಅಭಿಯಂತರರು

ಈ. ಶಿವರುದ್ರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ

**ವರದಿಗೆ ಲಗತ್ತಿಸಿರುವ ಅನುಬಂಧಗಳು:**

1) The Punjab Ad-hoc, Contractual Daily Wage, Temporary, Work Charged and Outsourced Employees' Welfare Act, 2016 ರ ಪ್ರತಿ.
2) ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ನಗರ ಸ್ಥಳೀಯ ಸಂಸ್ಥೆಗಳಿಂದ ನೇರವಾಗಿ ವೇತನವನ್ನು ನೀಡಲು ಹೊರಡಿಸಿರುವ ಆದೇಶ ಸಂಖ್ಯೆ: 16/15/2014–2.ಸಿ1, ದಿನಾಂಕ 26/6/2014.
3) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 213/2013ರಲ್ಲಿನ ತೀರ್ಪು.
4) ಗುಜರಾತ್ ಎಲೆಕ್ಟ್ರಿಸಿಟಿ ಬೋರ್ಡ್ ವಿ/– ಹಿಂದ್ ಮಜ್ದೂರ್ ಸಭಾ & ಇತರರು (1995 11 ಐಎ 790) ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪು.